ಮೈಮುರಿದು ಮೇಲೆದ್ದ ಪ್ರದೀಪ ಸುತ್ತಮುತ್ತಲೆಲ್ಲಾ ಒಮ್ಮೆ ಕಣ್ಣೋಡಿಸಿದ. ಸಂಶಯಾಸ್ಪದವಾಗಿದ್ದೇನೂ ಗೋಚರಿಸಲಿಲ್ಲ. ಇನ್ನು ತನ್ನ ಕಾರ್ಯಾಚರಣೆ ಸುರು ಮಾಡಬಹುದೆಂಬ ಯೋಚನೆ ಬರುತ್ತಿದ್ದಂತೆ, ಸ್ಮಶಾನದ ದಿಕ್ಕಿನ ರಸ್ತೆಯಲ್ಲಿ ನಡೆಯಲಾರಂಭಿಸಿದ.

ನಡುರಾತ್ರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಪ್ರದೀಪನಿಗೆ ಸುತ್ತಲಿನ ವಾತಾವರಣ ಭಯಗೊಳಿಸುತ್ತಿತ್ತು. ಮನಸ್ಸಿನಲ್ಲಿದ್ದ ಸಂಶಯ, ಗೊಂದಲ, ಆತಂಕಗಳು ಆತನ ನಡಿಗೆಯನ್ನು ನಿಧಾನಗೊಳಿಸಿದವು. ಉದ್ವೇಗಗೊಂಡಿದ್ದರೂ ಮನದಲ್ಲಿದ್ದ ಛಲ ಆತನನ್ನು ಮುಂದಡಿಯಿಡಲು ಪ್ರೇರೇಪಿಸುತ್ತಿತ್ತು. ನಡೆಯುತ್ತಾ ಪೇಟೆಯಿಂದ ಸುಮಾರು ಮುಕ್ಕಾಲು ಕಿ.ಮೀ. ದೂರ ಸಾಗಿ ಬಂದಿದ್ದ ಪ್ರದೀಪ. ಅಷ್ಟರಲ್ಲಿ ಏನೋ ವಿಚಿತ್ರವಾದ ಸದ್ದು ಆತನನ್ನು ಸರಕ್ಕನೆ ನಿಲ್ಲುವಂತೆ ಮಾಡಿತು.

ಯಾವುದೋ ಪ್ರಾಣಿ ಜೋರಾಗಿ, ದೀರ್ಘವಾಗಿ ಉಸಿರೆಳೆದುಕೊಂಡು ಬಿಡುವಂತೆ ಆ ಸದ್ದು ಕೇಳಿಸಿತು ಪ್ರದೀಪನಿಗೆ. ಎದೆಯಲ್ಲಿ ಭಯದ ಕುಣಿದಾಟ ಶುರುವಾಯಿತು. ಕಿವಿಗೊಟ್ಟು ಆಲಿಸಿದಾಗ ಆ ಸದ್ದು ಇನ್ನಷ್ಟು ಜೋರಾದಂತೆ, ವೇಗ ಹೆಚ್ಚಿದಂತೆ ಅನಿಸಿತು. ಒಂದೇ ರೀತಿಯ ಸದ್ದು ಮರುಕಳಿಸುತ್ತಿತ್ತು. ಪ್ರದೀಪನಿಗೆ ಅದು ಪ್ರಾಣಿಯಿಂದ ಹೊರಡುವ ಸದ್ದಲ್ಲವೆಂದು ಖಾತ್ರಿಯಾಯಿತು. ಸ್ವಲ್ಪ ಹೊತ್ತಿನ ಬಳಿಕ ಧಡ್ ಧಡಾಲ್ ಎಂದು ಏನೋ ಬಂಡೆಗಳುರುಳಿ ಬಿದ್ದಂತೆ ಕೇಳಿಸಿತು.

ಪ್ರದೀಪ ನಿಂತುಕೊಂಡಿದ್ದ ಸ್ಥಳ ತಿರುವಿನಲ್ಲಿತ್ತು. ಅದೊಂದು ಕಡಿದಾದ ಬೆಟ್ಟದಂಥ ಸ್ಥಳ. ಬಲ ಬದಿಗೆ ಗುಡ್ಡ ಎತ್ತರವಾಗಿ ಹರಡಿ ಬರೀ ಕಾಡು ಮಾತ್ರ ಕಾಣುತ್ತಿತ್ತು. ಎಡ ಬದಿ ಸಮತಟ್ಟಾಗಿ ಮುಂದುವರಿದಿತ್ತು. ಇನ್ನೂ ಮುಂದೆ ಆತ ನಡೆದುಕೊಂಡು ಹೋಗುತ್ತಿದ್ದಂತೆ ಆ ಸದ್ದು ಕೇಳಿಸುತ್ತಲೇ ಇತ್ತು. ಎಲ್ಲೋ ದೂರದಲ್ಲಿ ಬೆಳಕು ಮೂಡಿ ಮಾಯವಾದಂತೆ, ಮಿಂಚು ಬಡಿದಂತೆ ಕಾಣಿಸುತ್ತಿತ್ತು. ಆದರೆ ನಿಖರವಾಗಿ ಏನೆಂಬುದನ್ನು ಕಂಡುಕೊಳ್ಳಲು ಆತ ಶಕ್ತನಾಗಲಿಲ್ಲ. ಹೃದಯ ಬಡಿತ ಹೆಚ್ಚಾಗಿ ತನಗೇ ಕೇಳಿಸುವಷ್ಟು ವೇಗವಾಗಿ ಬಡಿಕೊಳ್ಳುತ್ತಿರುವುದು ಆತನಿಗರಿವಾಗಿತ್ತು. ಹೆದರಿಕೆಯು ನರನಾಡಿಗಳಲ್ಲಿ ಪ್ರವೇಶಿಸುತ್ತಿದೆಯೆನಿಸಿತು ಪ್ರದೀಪನಿಗೆ.

ದೃಢ ಮನಸ್ಸಿನಿಂದ ಯಾವುದೇ ಕೆಲಸಕ್ಕೆ ಕೈ ಹಾಕಿದ ಮೇಲೆ ಹಿಂತಿರುಗಿ ನೋಡುವ ಜಾಯಮಾನ ಅವನದಲ್ಲ. ಆದರೆ ಇದು ಗುರುತು ಪರಿಚಯದವರ್‍ಯಾರೂ ಇಲ್ಲದ ದುರ್ಗಮ ಸ್ಥಳ. ಟಾರ್ಚ್ ಬಿಟ್ಟರೆ ಬೇರೇನೂ ಆಯುಧವಿರಲಿಲ್ಲ ಆತನಲ್ಲಿ. ವಾಹನಗಳ ಸದ್ದೂ ಅಡಗಿ ಹೋಗಿತ್ತು. ಅರಣ್ಯ ಪ್ರದೇಶವಾಗಿದ್ದರಿಂದ ನಿಶಾಚರ ಮೃಗಗಳ, ಕೀಟಗಳ ಗಲಾಟೆ ಒಂದೇ ಸಮನೆ ಕಿವಿಗಪ್ಪಳಿಸಿ ಹುಚ್ಚು ಹಿಡಿಸುವಂತಿತ್ತು. ಇದೆಲ್ಲಾ ಆತನಿಗೆ ಹೊಸದು. ಆದರೂ ತನ್ನ ಸಾಮರ್ಥ್ಯದ ಮೇಲೆ ಆತನಿಗೆ ನಂಬಿಕೆಯಿತ್ತು. ತನ್ನ ಯೋಜನೆಯನ್ನು ನೆನಪಿಸಿಕೊಂಡು, ಮೈ ಕೊಡವಿ ಮುನ್ನಡೆದನಾತ.

ಮುಂದೆ ಹೋಗುತ್ತಿದ್ದಂತೆ ಎಡಗಡೆಯಲ್ಲೊಂದು ಬೇಲಿ ಹಾಕಿದ ಜಾಗ ಕಾಣಿಸಿತು. ಅದೇ ಸ್ಮಶಾನವಾಗಿತ್ತು. ಒಂದು ಕ್ಷಣ ಪ್ರದೀಪ ಹಿಂತಿರುಗಿ ಕಣ್ಣು ಬಿಟ್ಟು ನೋಡಿದ. ಯಾವುದೇ ಸಂಶಯಾಸ್ಪದ ಚಲನೆ ಕಾಣಲಿಲ್ಲ. ಇನ್ನಷ್ಟು ಮುಂದುವರಿದು ಸುತ್ತಮುತ್ತ ಪರೀಕ್ಷಿಸಿದ. ಯಾವುದೇ ವಿಶೇಷ ಸಂಗತಿ ಅನುಭವಕ್ಕೆ ಬರಲಿಲ್ಲ. ಈ ಮೊದಲು ಕೇಳಿಸುತ್ತಿದ್ದ ಸದ್ದು ಸ್ತಬ್ಧವಾಗಿತ್ತು. ಕೈಗಡಿಯಾರದ ರೇಡಿಯಂ ಮುಳ್ಳುಗಳು ಹನ್ನೆರಡು ಗಂಟೆಗೆ ಐದು ನಿಮಿಷವಿರುವುದನ್ನು ಮಿನುಗಿ ತೋರಿಸುತ್ತಿದ್ದವು. ಪ್ರದೀಪನ ಮೈ ಬೆಚ್ಚಗಾಯಿತು. ವಿಸ್ಕಿಯ ನಶೆ